

ಟೈಮಿಂಗ್ ಕೊಂಚವೂ ತಾಳ ತಪ್ಪುವುದಿಲ್ಲ. ತನ್ನ ಇತಿಮಿತಿ ಮೀರಿ ದೊಡ್ಡ ಮೀನು ಹಿಡಿದಾಗ ಮಾತ್ರ ಎಡವಟ್ಟಾಗಿ ಕೈ ತುತ್ತು ತಪ್ಪಿ ಹೋಗುತ್ತಿತ್ತು.

ಒಂದು ದಿನ ಲೋಕೇಶ, ನರಿ ಮತ್ತು ತೋಳಗಳನ್ನು ತೋರಿಸುತ್ತೇನೆ ಬನ್ನಿ ಎಂದು ಕರೆದುಕೊಂಡು ಹೊರಟನು. ಅಭಯಾರಣ್ಯದ ಮುಖ್ಯ ರಸ್ತೆಯನ್ನು ಹೊರತು ಪಡಿಸಿ ಒಳದಾರಿಗಳಲ್ಲಿ ಸೈಕಲ್ ರಿಕ್ಷಾ ಚಾಲಕನಿಗೆ ಪ್ರವೇಶವಿರಲಿಲ್ಲ. ಹೀಗಾಗಿ ನಾವು ಟ್ರೈಪ್ಯಾಡು, ಕ್ಯಾಮೆರಾ ಎಲ್ಲಾ ಹೊತ್ತುಕೊಂಡು ಮುಖ್ಯರಸ್ತೆಯಿಂದ ಒಳಕ್ಕೆ ನಡೆದೇ ಹೋಗಬೇಕಿತ್ತು. ಕೆಲವೊಮ್ಮೆ ಈ ಒಳದಾರಿಗಳು ಎರಡು ಮೂರು ಮೈಲುಗಳಿಗಿಂತ ಹೆಚ್ಚಿಗೇ ಇರುತ್ತಿದ್ದವು. ‘ಜನರು ಊರಿನಲ್ಲಿ ಸತ್ತ ದನಕರುಗಳನ್ನು ತಂದು ಈ ಕಾಡಿನ ತುದಿಯಲ್ಲಿ ಬಿಸಾಕುತ್ತಾರೆ. ಅವುಗಳನ್ನು ತಿನ್ನಲು ತೋಳಗಳು, ನರಿಗಳು ಬಂದೇ ಬರುತ್ತವೆ. ಎಂದು ಹೇಳಿ ಆಸೆ ಹುಟ್ಟಿಸಿದ. ಪಕ್ಷಿಗಳ ಚಿತ್ರ ತೆಗೆದು ಸಾಕಾಗಿದ್ದ ನಾವು ಈ ದುಸ್ಸಾಹಸಕ್ಕೆ ಅವನ ಜೊತೆ ಸಾಥ್ ನೀಡಲು ಅಣಿಯಾದೆವು. ಸಾಕಷ್ಟು ಹೊತ್ತು ನಡೆದು ಸದರಿ ಸ್ಥಳಕ್ಕೆ ಬಂದಾಗ ಅಳಿದುಳಿದ ಪ್ರಾಣಿಯ ಮೂಳೆಗಳು, ಗಬ್ಬು ವಾಸನೆ ಬಿಟ್ಟರೆ ಮತ್ತೇನೂ ಕಾಣಲಿಲ್ಲ. ತೋಳ ನರಿ ಇರಲಿ ಅಲ್ಲಿ ಒಂದು ಕಾಗೆಯ ಸುಳಿದಾಟವೂ ಇರಲಿಲ್ಲ. ಮೂಳೆಗಳನ್ನು ಆಯ್ದು ತಿನ್ನಲು ರಣ ಹದ್ದುಗಳು ಮೊದಲು ಬರುತ್ತಿದ್ದವು. ಈಗೀಗ ಅವೂ ಕಡಿಮೆಯಾಗಿವೆ ಎಂದಾತ ಗೊಣಗಿಕೊಂಡ. ಕಾದು ಬೇಸರವಾಗಿ ಅಲ್ಲಿಂದ ಹೊರಟು ಉಸ್ಸಪ್ಪ ಎಂದು ಬರುವಾಗ ಲೋಕೇಶ ಸಡನ್ನಾಗಿ ನಿಂತು ‘ಓಹ್ ಅಲ್ಲಿ ನೋಡಿ ಸಾರ್’ ಎಂದು ಕೂಗಿ, ಒಂದು ದಿಬ್ಬದ ಕಡೆ ಕೈ ತೋರಿಸತೊಡಗಿದ. ಅವನೊಬ್ಬನ ಹೊರತುಪಡಿಸಿ ನಮಗೆ ಅಲ್ಲೇನೂ ಕಾಣುತ್ತಿರಲಿಲ್ಲ.

ಬೈನಾಕ್ಯುಲರ್ ಬಳಸಿ ನೋಡಿದಾಗ ದೂರದಲ್ಲಿ ಎರಡು ತೋಳಗಳು ಸುಖದಲ್ಲಿ ನಿದ್ದೆ ಬಾರಿಸುತ್ತಿದ್ದವು. ಅವುಗಳ ಹತ್ತಿರಕ್ಕೆ ಹೋಗಲಾಗದಂತೆ ಕಾರೆ ಮುಳ್ಳಿನ ಗಿಡಗಳೂ, ಕಪ್ಪು ಕೆಸರು, ಜೊತೆಗೆ ಬಗ್ಗಡದ ನೀರೂ ಅಡ್ಡಲಾಗಿ ನಿಂತಿತ್ತು. ಇಲ್ಲಿ ಇಳಿದು ಹೋಗುವುದು ತುಂಬಾ ಅಪಾಯವೆಂದೂ, ಉಸುಕಿನ ಗುಂಡಿಗಳು ಇರುವುದರಿಂದ ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಆಗದೆಂದು ಅವನು ಮೊದಲೇ ಎಚ್ಚರಿಸಿದ. ಉಂಡು ಬಂದು ಗಡದ್ದಾಗಿ ಗೊರಕೆ ಹೊಡೆಯುತ್ತಿದ್ದ ತೋಳಗಳು ಸೌಜನ್ಯಕ್ಕಾದರೂ ಕತ್ತೆತ್ತಿ ಒಮ್ಮೆಯೂ ನಮ್ಮೆಡೆಗೆ ನೋಡಲಿಲ್ಲ. ನಮ್ಮ ಬಳಿ ಇರುವ ಲೆನ್ಸುಗಳು ಅವುಗಳ ಸಮೀಪಕ್ಕೂ ಸುಳಿಯುತ್ತಿರಲಿಲ್ಲ. ಥೂ ನಿಮ್ಮ ಎಂದು ಬೈದುಕೊಂಡು, ಬೆವರು ಒರೆಸಿಕೊಂಡು ವಾಪಸ್ಸು ಬಂದೆವು. ●